† ಶ್ರೀ ಎಂ. ವೈ ಘೋರ್ಪಡೆ.—ಮಾನ್ಯ ಅಧ್ಯಕ್ಷರೇ. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಮಲ್ಲಾಪುರ ಗ್ರಾಮದಲ್ಲಿ ಮೂರು ಮನೆಗಳು ವಿಪರೀತ ಮಳೆ ಬಂದು ಬಿದ್ದಿದೆ. ಅದನ್ನು ನರಿಪಡಿಸಿದ್ದಾರೆ. ಮತ್ತು ಆ ಗ್ರಾಮದಲ್ಲಿ 10 ಮನೆಗಳನ್ನು ಸಂಪೂರ್ಣವಾಗಿ ಕಟ್ಟಿದ್ದಾರೆ. ಕಟ್ಟಿರುವ ಆರು ಮನೆಗಳಲ್ಲಿ ಈಗಾಗಲೆ ಜನರು ವಾಸಕ್ಕೆ ಹೋಗಿದ್ದಾರೆ. ಇನ್ನು ನಾಲ್ಕು ಮನೆಗಳೂ ಸಹ ಈ ತಿಂಗಳಲ್ಲಿ ಪೂರ್ತಿಯಾಗಿ ಪೂರೈಸುತ್ತದೆ. ಮಲ್ಲಾಪುರ ಗ್ರಾಮದಲ್ಲಿ ಮಳೆಯಿಂದ ಬಿದ್ದಿರತಕ್ಕ ಮೂರು ಮನೆಗಳನ್ನು ಈಗಾಗಲೇ ರಿಪೇರಿ ಮಾಡಿ ನರಿಪಡಿಸಿದ್ದಾರೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ನಾನು ಹೇಳಿದ 10-12 ಮನೆಗಳು ಮಲ್ಲಾಪುರಕ್ಕೆ ಸೇರಿದ್ದಲ್ಲ. ಬೇರೆ ಕಡೆ ಕಟ್ಟಿದ್ದು. ಅಲ್ಲಿ 13 ಮನೆಗಳನ್ನು ಪೂರಾ ಮಾಡಲಿಲ್ಲ. 500 ರೂಪಾಯಿ ಕಾಂಟ್ರಿಬ್ಯೂಷನ್ ನಿಮ್ಮ ಇಲಾಖೆಯವರು ಕೇಳುತ್ತಾರೆ. ಅವರು ಕಾಂಟ್ರಿಬ್ಯೂಷನ್ ಕೊಡುವ ಸ್ಥಿತಿಯಲ್ಲಿಲ್ಲ. 18 ಪರ್ಸೆಂಟ್ ತಾಲ್ಲೂಕು ಅಭಿವೃದ್ಧಿ ಸಂಸ್ಥೆಯಿಂದ ಕೊಡಿಸಿ ಅದನ್ನು ಪೂರಾ ಮಾಡುವುದಕ್ಕೆ ಸರ್ಕಾರದವರು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ಇದು ಬೇರೆ ವಿಚಾರವಾಯಿತು. ಮನೆಗಳು ಬಿದ್ದ ವಿಚಾರವಲ್ಲ. ಕಾಂಟ್ರಿಬ್ಯೂಷನ್ ಕೊಡದೆ ಪೂರ್ತಿ ಮಾಡುವುದಕ್ಕೆ ತೊಂದರೆ ಇದ್ದರೆ ಅದು ಬೇರೆ ವಿಚಾರವಾಗುತ್ತದೆ. ಪ್ರತ್ಯೇಕವಾಗಿ ಕೆಲವರಿಗೆ ಆ ರೀತಿ ಸಹಾಯ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ನಮ್ಮ ರಾಜ್ಯದಲ್ಲಿ ಎಷ್ಟೋ ಕಡೆ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಕಟ್ಟುವ ಪದ್ಧತಿ ಪ್ರಕಾರ ಮನೆಗಳನ್ನು ಪೂರ್ತಿ ಮಾಡಿದ್ದಾರೆ. ಮತ್ತು ಕೆಲವು ಕಡೆ ಮಾಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರು ಆ ಗ್ರಾಮಕ್ಕೆ ಹೋಗಿ ಜನಗಳಿಗೆ ದುಡ್ಡು ಕೊಡುವುದು ಬೇಡ ಮನೆಗಳನ್ನು ಪೂರ್ತಿ ಮಾಡುವ ಕೆಲಸದಲ್ಲಿ ಸಹಾಯ ಮಾಡಿದರೆ ಸಾಕು ಎಂದು ಹೇಳಲು ಎಲ್ಲ ತೊಂದರೆಗಳನ್ನೂ ಗಮನದಲ್ಲಿಟ್ಟುಕೊಂಡು ಬೇರೆ ಕಡೆ ಮನೆಗಳನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಈ ಗ್ರಾಮದಲ್ಲೂ ಅದೇ ರೀತಿ ಮಾಡುತ್ತೇವೆ.

Extension of M. F. A. L. and S. F. D. A. to Southern parts of Bijapur.

324. SRI B. M. HORAKERI (Guledgud) Will the Minister for Agriculture and Animal Husbandry be pleased to state:—

(*a*) whether the southern parts of Bijapur District *viz*., Badami, Hungund, Bagalkot Taluks consist of more number of marginal farmers and small holders ;

(*b*) if so, whether there is a proposal before Government to extend the M. F. A. L. and S. F. D. A. to these taluks immediately ?

SRI N. CHIKKEGOWDA. Minister for Agriculture and Animal Husbandry).—

(*a*) Yes.

(*b*) No.

ಶ್ರೀ ಬಿ ಎಂ. ಹೊರಕೇರಿ.—ಸ್ವಾಮಿ, ವಿಜಾಪುರ ಜಿಲ್ಲೆಯ ಬಾದಾಮಿ, ಹುನಗುಂದ, ಬಾಗಲಕೋಟೆ ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ಹಿಡುವಳಿದಾರರು ಇದ್ದಾರೆಂದು ತಾವು ಒಪ್ಪಿಕೊಳ್ಳುತ್ತಿದ್ದೀರಿ. ಆದರೆ ಈ ಎಂ. ಎಫ್. ಎ. ಎಲ್ ಹಾಗೂ ಎಸ್. ಎಫ್. ಡಿ. ಎ ಈ ಎರಡು ಯೋಜನೆಗಳನ್ನು ಯಾತಕ್ಕೆ ಅಲ್ಲಿ ವಿಸ್ತರಿಸಿಲ್ಲ?

† ಶ್ರೀ ಎನ್. ಚಿಕ್ಕೇಗೌಡ — ತಾವು ಕೇಳಿರತಕ್ಕ ತಾಲ್ಲೂಕುಗಳಲ್ಲಿ ಮಾರ್ಜಿನಲ್ ಫಾರ್ಮರ್ಸ್‌ಗೆ ಏನೊಂದು ಅನುಕೂಲಗಳನ್ನು ಕಲ್ಪಿಸಬೇಕಾಗಿತ್ತು ಅದನ್ನು ಮಾಡಲಿಕ್ಕೆ ಆಗಲಿಲ್ಲ. ಆದ್ದರಿಂದ ಇಡೀ ಬಿಜಾಪುರ ಜಿಲ್ಲೆಗೆ ಡಿ. ಪಿ. ಎ. ಪಿ. ಪ್ರೋಗ್ರಾಮ್ ಕೊಟ್ಟ ಮಾರ್ಜಿನಲ್ ಫಾರ್ಮರ್ಸ್ ಪ್ರಾಜೆಕ್ಟ್ ೫೧-೫೨ಕ್ಕೆ ಮುಗಿಯುತ್ತದೆ ಆದ್ದರಿಂದ ಕೇಂದ್ರ ಸರ್ಕಾರದವರು ಬಿಜಾಪುರ ಜಿಲ್ಲೆ ಆಗಾಗ ಬರಗಾಲಕ್ಕೆ ತುತ್ತಾಗುತ್ತದೆ ಎಂದು ಡಿ. ಪಿ. ಎ. ಪಿ. ಸ್ಕೀಮಿನಲ್ಲಿ ೨೪ ಕೋಟಿ ೫೨ ಲಕ್ಷ ರೂಪಾಯಿಗಳನ್ನು ೫ ವರ್ಷದಲ್ಲಿ ಖರ್ಚು ಮಾಡತಕ್ಕ ಯೋಜನೆ ಮಂಜೂರು ಮಾಡಿ ಈಗಾಗಲೇ ಅದು ಕಾರ್ಯಗತವಾಗುತ್ತಿದೆ ಆದ್ದರಿಂದ ಮಾರ್ಜಿನಲ್ ಫಾರ್ಮರ್ಸ್‌ಗೆ ಅನೇಕ ಕ್ಷೇತ್ರಗಳಲ್ಲಿ ಏನೇನು ಅನುಕೂಲಗಳನ್ನು ಮಾಡಿಕೊಡುತ್ತಿದ್ದಾರೆ ಅದೇರೀತಿ ವ್ಯವಸಾಯ, ಪಶುಪಾಲನೆ ಕ್ಷೇತ್ರದಲ್ಲೂ ಸಹ ಕೊಡಲಾಗುತ್ತದೆ. ಇದನ್ನು ಇಡೀ ಜಿಲ್ಲೆಗೆ ವಿಸ್ತರಿಸಿದ್ದೇವೆ. ಆದರಿಂದ ಹೆಚ್ಚಿಗೆ ಅನುಕೂಲವಾಗುತ್ತದೆ.

ಶ್ರೀ ಬಿ. ಎಂ. ಹೊರಕೇರಿ — ಡಿ. ಪಿ. ಎ. ಪಿ. ನಲ್ಲಿ ಒಂದು ವಿಚಾರ ತಿಳಿದುಬರುತ್ತದೆ. ಏನೆಂದರೆ ಅದು ಕೆಲವೊಂದು ಪಾಕೆಟ್ಸ್‌ಗೆ ಮಾತ್ರ ಅನ್ವಯವಾಗುತ್ತದೆ ಉಳಿದ ಭಾಗಕ್ಕೆ ಅನ್ವಯವಾಗುವುದಿಲ್ಲ ಎಂದು ತಿಳಿದುಬರುತ್ತದೆ. ಹಾಗಿದ್ದಲ್ಲಿ ಏನು ಮಾಡುತ್ತೀರಿ?

ಶ್ರೀ ಎನ್. ಚಿಕ್ಕೇಗೌಡ — ಇದು ಬಿಜಾಪುರ ಜಿಲ್ಲೆಗೆ ಅನ್ವಯಿಸುತ್ತದೆ. ಪಾಕೆಟ್ಸ್ ವಿಷಯ ಬರುವುದಿಲ್ಲ. ಸಣ್ಣ ರೈತರು ಕೃಷಿ ಕಾರ್ಮಿಕರು ಎಲ್ಲರಿಗೂ ಅನ್ವಯಿಸುತ್ತದೆ. ಆದ್ದರಿಂದ ಡಿ. ಪಿ. ಎ. ಪಿ. ನಲ್ಲೂ ಹೆಚ್ಚಿಗೆ ಅನುಕೂಲ ಅವರಿಗೆ ಬರುತ್ತದೆ.

ಶ್ರೀ ಬಿ. ಎಂ. ಹೊರಕೇರಿ.—ಹಾಗಿದ್ದಲ್ಲಿ ನಮ್ಮ ತಾಲೂಕಿನಲ್ಲಿ ಈಗಾಗಲೇ ಸಮೀಕ್ಷೆ ಕೆಲಸಮುಗಿದಿದೆ. ಕೆಲವೊಂದು ಪಾಕೆಟ್ಸ್‌ನಲ್ಲಿ ಅಂದರೆ ಅನಭಿವೃದ್ಧಿ ಕ್ಷೇತ್ರದಲ್ಲಿ ವಾಟರ್ ಷೆಡ್ ಇರಿಸಬೇಕು ಎಂದು ಮಾಡಿದೆ. ಉಳಿದ ಕ್ಷೇತ್ರಕ್ಕೆ ಆದರಿಂದ ಅನುಕೂಲವಾಗುವುದಿಲ್ಲ, ಆದ್ದರಿಂದ ತಮ್ಮಲ್ಲಿ ಕೇಳಂತ್ತಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ.— ಆ ರೀತಿ ಏನಾದರೂ ಇದ್ದರೆ ಅದನ್ನು ನಮಗೆ ತಿಳಿಸಿದರೆ ಅದನ್ನು ಪರಿಶೀಲಿಸಿ ಸರ್ಕಾರದಿಂದ ಆದೇಶ ಕೊಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಅಧ್ಯಕ್ಷರು — ಇಲ್ಲಿಗೆ ಪ್ರಶ್ನೋತ್ತರ ವೇಳೆಗಳು ಮುಗಿದವು.

MADAM SPEAKER — Question numbers 495 and 517 are held over. Now questions are over.

Question for Answers on the day.
(but not taken up)

Fair Price Depot of Sahodari Samaj in Chickballapur Town.

492. SRI C. V. Venkatarayappa (Chikballapur) Will the Minister for Food and Civil Supplies be pleased to state.—

(*a*) whether it is not a fact that a Fair Price Depot (Retail) has been granted in the name of Sahodari Samaj in Chikballapur Town;

(*b*) whether it is not a fact that this depot was suspended once because of smuggling of food articles supplied by Government;

(*c*) whether it is not a fact that while sugar was being smuggled for the second time it was caught red-handed and the Assistant Commissioner has cancelled the Depot and recommended to the Deputy Commissioner, Kolar to prosecute the offender;

(*d*) when was this done and the action taken by the Deputy Commissioner in the matter?